4	ಕಮಲಾಪುರ
5	ಯಾದಗೀರ
6	ಗುತಮಿಟ್ಕಲ್
7	ನಿಂಬರ್ಗ
8	ಹುಮನಾಬಾದ್
9	ರಾಜೇಶ್ವರ
10	ರಾಯಚೂರು
11	ಸಿಂಧನೂರ
12	ಗಿಲ್ಲೇಸೂಗೂರ
13	ಹಟ್ಟಿ
14	ಕವಿತಾಳ
15	ಹೊಳಗುಂಡಿ
16	ನೆಲಕುದ್ರಿ
17	ಹೊಸಪೇಟೆ
18	ಕೊಪ್ಪಳ
19	ಹಿರೇಶಿಂದೋಗಿ

1316 (538) ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಾಗರೀಕರಿಗೆ ಪ್ರತಿದಿನ ಎಷ್ಟು ನೀರಿನ ಅವಶ್ಯಕತೆ ಇದೆ;

ಆ) ಈಗ ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ನೀರನ್ನು ಒದಗಿಸಲಾಗುತ್ತಿದೆ;

ಇ) ಕಾವೇರಿ 5ನೇ ಹಂತದ ಯೋಜನೆಗೇನಾದರೂ ಜಲಮಂಡಳಿ ಚಿಂತನೆ ನಡೆಸಿದೆಯೇ;

ಈ) ಈಗ ನೀರಿನ ಸೋರಿಕೆ ಎಷ್ಟು ಪ್ರಮಾಣದಲ್ಲಿದೆ, ಇದನ್ನು ಕಡಿಮೆ ಮಾಡಲು ತೆಗೆದು ಕೊಂಡಿರುವ ಕ್ರಮಗಳೇನು;

ಉ) ಈಗ ಉಪಯೋಗಿಸಿದ ನೀರಿನಲ್ಲಿ ಎಷ್ಟನ್ನು ಸಂಸ್ಕರಿಸಿ ಮತ್ತೆ ಬಳಕೆ ಮಾಡಲಾಗುತ್ತಿದೆ, ಈ ಸಂಸ್ಕರಿಸುವ ಘಟಕಗಳು ಎಷ್ಟು ಇವೆ, ಎಲ್ಲೆಲ್ಲಿ ಇವೆ (ವಿವರ ನೀಡುವುದು)?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ನಗರಕ್ಕೆ ದಿನಂಪ್ರತಿ 900 ದಶಲಕ್ಷ ಲೀಟರ್ ಪ್ರಮಾಣದ ನೀರಿನ ಅವಶ್ಯಕತೆಯಿರುತ್ತದೆ.

ಆ) ನಗರಕ್ಕೆ ದಿನಂಪ್ರತಿ ವಿವಿಧ ಮೂಲಗಳಿಂದ ಸರಬರಾಜು ಆಗುತ್ತಿರುವ ನೀರಿನ ಪ್ರಮಾಣ

1)	ಕಾವೇರಿ ಮೊದಲನೇ ಹಂತ	135 ದಶಲಕ್ಷ ಲೀಟರ್
2)	ಕಾವೇರಿ ಎರಡನೇ ಹಂತ	135 ದಶಲಕ್ಷ ಲೀಟರ್
3)	ಕಾವೇರಿ ಮೂರನೇ ಹಂತ	270 ದಶಲಕ್ಷ ಲೀಟರ್
4)	ಕಾವೇರಿ ನಾಲ್ಕನೇ ಹಂತ, 1ನೇಘಟ್ಟ–	270 ದಶಲಕ್ಷ ಲೀಟರ್
5)	ತಿಪ್ಪಗೊಂಡನಹಳ್ಳಿ ಜಲಾಶಯ –	30 ದಶಲಕ್ಷ ಲೀಟರ್
	ಒಟ್ಟು	**840 ದಶಲಕ್ಷ ಲೀಟರ್**

ಇ) ಕಾವೇರಿ 5ನೇ ಹಂತದ ರೂಪದಲ್ಲಿ ಕಾವೇರಿ ನಾಲ್ಕನೇ ಹಂತ 2ನೇ ಘಟ್ಟ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದ್ದು, ಯೋಜನೆ ಪ್ರಗತಿ ಯಲ್ಲಿರುತ್ತದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು 3383 ಕೋಟಿ ಅಂದಾಜು ನಿಗದಿಯಾಗಿದ್ದು, ಇದರಿಂದ ನಗರಕ್ಕೆ ಹೆಚ್ಚುವರಿಯಾಗಿ 500 ದಶಲಕ್ಷ ಲೀಟರ್ ನೀರು ದಿನಂಪ್ರತಿ ತಲುಪುತ್ತದೆ.

ಈ) ಪ್ರತಿದಿನ ಲೆಕ್ಕ ಸಿಗದ ನೀರಿನ ಒಟ್ಟಾರೆ ಪ್ರಮಾಣ ಶೇಕಡಾ 37ರಷ್ಟು ಇರುತ್ತದೆ. ಇದನ್ನು ತಗ್ಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಕಬ್ಬಿಣ/ಪಿವಿಸಿ ಕೊಳವೆಗಳನ್ನು ಮೃದು ಉಕ್ಕಿನ ಕೊಳವೆ–ಗಳಿಂದ ಬೆಸುಗೆ ಹಾಕಿ ಜೋಡಿಸುವುದು ಮತ್ತು ಕೊಳವೆ ಜೋಡಣೆಯನ್ನು ರಬ್ಬರ್‌ರಿಂಗ್‌ಗಳಿಂದ ಮಾಡುವುದು.
2) ಸಾಲು ಮರದ ಬೇರುಗಳಿಂದ ಸೋರುವಿಕೆಯನ್ನು ತಪ್ಪಿಸಲು ಕೊಳವೆ ಮಾರ್ಗವನ್ನು ಸ್ಥಳಾಂತರಿಸುವುದು.
3) 30 ವರ್ಷಕ್ಕೂ ಮೇಲ್ಪಟ್ಟು ಹಳೆಯದಾದ ಮತ್ತು ತುಕ್ಕು ಹಿಡಿದ ಕೊಳವೆಗಳನ್ನು ಹೊಸ ಕೊಳವೆಗಳಿಂದ ಬದಲಾಯಿಸುವ ಯೋಜನೆ.
4) ನೀರು ಸೋರುವಿಕೆ ತಡೆಗಟ್ಟಲು ವಿಶೇಷ ಕಾರ್ಯಪಡೆ ನಿಯೋಜನೆ.

5) ರಸ್ತೆ ಮಧ್ಯದಲ್ಲಿ ಹಾದುಹೋಗುತ್ತಿರುವ ಕೊಳವೆಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸುವುದು.

6) ದೋಷಪೂರಿತ ಮಾಪನಗಳನ್ನು ಬದಲಾಯಿಸುವುದು.

7) ಜಪಾನ್ ಬ್ಯಾಂಕ್ ಮತ್ತು ಜೆ.ಎನ್.ಎನ್.ಯು.ಆರ್.ಎಂ. ಸಹಯೋಗದೊಂದಿಗೆ ರೂ.700/–ಕೋಟಿ ಮೊತ್ತದಲ್ಲಿ ನಗರದಲ್ಲಿರುವ ಹಳೆಯ ತುಕ್ಕು ಹಿಡಿದ ನೀರಿನ ಕೊಳವೆಗಳು, ಗೃಹ ಸಂಪರ್ಕಗಳು ಮತ್ತು ನೆಲಮಟ್ಟದ ಜಲಾಶಯಗಳನ್ನು ಬದಲಾಯಿಸಲು/ಪುನರ್ ರೂಪಿಸಲು ಬೃಹತ್ ಯೋಜನೆ ಹಮ್ಮಿಕೊಳ್ಳಲಾಗಿದೆ.

8) ಗೃಹಗಳಿಗೆ ನೀರು ಸಂಪರ್ಕ ಕಲ್ಪಿಸುವ ಜಿ.ಐ. ಕೊಳವೆ ಉಪಯೋಗಿಸುವ ಬದಲಾಗಿ ಪುಡ್‌ಗ್ರೇಡ್ MDPE (Medium Density Poly Ethylene) ಕೊಳವೆಗೆ ಹೊರ ಕವಚ ಕೊಳವೆಯೊಂದಿಗೆ ಅಳವಡಿಸಲು ಮಾರ್ಪಾಡು ಮಾಡಲಾಗುತ್ತಿದೆ.

9) ನಗರದ ವಿವಿಧ ಸ್ಥಳಗಳಲ್ಲಿರುವ ಉನ್ನತ ವ್ಯಾಸದ ಕೊಳವೆಗಳಲ್ಲಿ ಹರಿಯುತ್ತಿರುವ ನೀರಿನ ಪ್ರಮಾಣ ಲೆಕ್ಕಿಸುವ ಪ್ರಯುಕ್ತ ಸಗಟು ಮಾಪನಗಳನ್ನು ಜೆ.ಎನ್.ಎನ್.ಯು. ಆರ್.ಎಂ. ಪದಕದಡಿ ರೂ. 16 ಕೋಟಿ ವೆಚ್ಚದಲ್ಲಿ ಅಳವಡಿಸಲು ಯೋಜನೆ ರೂಪಿಸಿ ಕೈಗೆತ್ತಿಕೊಳ್ಳಲಾಗಿದೆ.

ಊ) ಪ್ರಸ್ತುತದಲ್ಲಿ 10 ದಶಲಕ್ಷ ಲೀಟರ್ ಸಂಸ್ಕರಿಸಿದ ನೀರು ದಿನಂಪ್ರತಿ ಪುನರ್ ಬಳಕೆಯಾಗುತ್ತಿರುತ್ತದೆ. ಸಂಸ್ಕರಿಸಿದ ಘಟಕಗಳ ಒಟ್ಟು ಸಂಖ್ಯೆ : 14. ಇವುಗಳು ಈ ಕೆಳಕಂಡ ಸ್ಥಳಗಳಲ್ಲಿರುತ್ತವೆ.

1) ವೃಷಭಾವತಿ ಕಣಿವೆ, ಮೈಸೂರು ರಸ್ತೆ 2) ವೃಷಭಾವತಿ ಕಣಿವೆ, ಮೈಸೂರು ರಸ್ತೆ 3) ಕೆಂಪಾಬುದಿ ಕೆರೆ ಹತ್ತಿರ 4) ಮೈಲ್‌ಸಂದ್ರ, ಕೆಂಗೇರಿ 5) ನಾಗಸಂದ್ರ, ಪೀಣ್ಯ 6) ಕೋರಮಂಗಲ ಮತ್ತು ಚಲಘಟ್ಟ ಕಣಿವೆ 7) ಕೋರಮಂಗಲ ಮತ್ತು ಚಲಘಟ್ಟ ಕಣಿವೆ 8) ಮಡಿವಾಳ ಕೆರೆ ಹತ್ತಿರ 9) ಕಾಡ್‌ಬಿಸನಹಳ್ಳಿ ವರ್ತೂರು 10) ಹೆಬ್ಬಾಳ 11) ಯಲಹಂಕ 12) ರಾಜ್ ಕಾಲುವೆ ಹೆಣ್ಣೂರು ಬಂಡೆ ಹತ್ತಿರ 13) ಜಕ್ಕೂರು ಯಲಹಂಕ 14) ಕೆ.ಆರ್.ಪುರಂ.